# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 410

ಸದಸ್ಯರ ಹೆಸರು : ಶ್ರೀ ಕೆ.ವಿ. ನಾರಾಯಣಸ್ವಾಮಿ
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 12.12.2018

ಉತ್ತರಿಸುವ ಸಚಿವರು : ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಉತ್ತರ ತಾಲ್ಲೂಕಿನ (ಅಪರ ಯಲಹಂಕ) ಬಗರ್ ಹುಕುಂ ಭೂ ಮಂಜೂರಾತಿ ಸಮಿತಿ ಹಾಗೂ ಅಧಿಕಾರಿಗಳಿಂದ ಕಾನೂನು ಬಾಹಿರವಾಗಿ ಭೂ ಮಂಜೂರಾತಿ (ನಮೂನೆ-53ರ ಅರ್ಜಿ ಮೇರೆಗೆ) ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **ಬಂದಿದೆ.**<br>ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸ.ನಂ.59 ಕ್ಕೆ ಸಂಬಂಧಿಸಿದಂತೆ ಒಟ್ಟು ವಿಸ್ತೀರ್ಣ 8-30 ಎ/ಗುಂಟೆ ಇದ್ದು, ಈ ಪೈಕಿ ನಿಯಮಗಳ ಅನುಸಾರ 1991 ಮತ್ತು 1998 ರಲ್ಲಿ ಕ್ರಮವಾಗಿ ನಮೂನೆ 50 ಮತ್ತು 53 ರಲ್ಲಿ ಒಟ್ಟು 6 ಜನ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>ಸದರಿ ಸ.ನಂ.59 ರಲ್ಲಿ ಒಟ್ಟು ವಿಸ್ತೀರ್ಣ 8-30 ಎ/ಗುಂಟೆ ಪೈಕಿ 1-20 ಎ/ಗುಂಟೆ ಜಮೀನಿಗೆ ಶ್ರೀಮತಿ ಹನುಮಕ್ಕ ಕೋಂ ಲೇ. ಗಂಗಯ್ಯ ಹಾಗೂ ಶ್ರೀ ಕೆ.ವಿ.ಅನಂತರಾಮಯ್ಯ ಬಿನ್ ವೆಂಕಟರಂಗಪ್ಪ ಇಬ್ಬರು ಸೇರಿದಂತೆ ನಮೂನೆ-53 ರಲ್ಲಿ ಒಂದೇ ಪ್ರದೇಶಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಸಕ್ರಮೀಕರಣ ಸಮಿತಿಯು ಶ್ರೀಮತಿ ಹನುಮಕ್ಕ ಕೋಂ ಲೇ.ಗಂಗಯ್ಯ ರವರ ದಿನಾಂಕ: 04-12-1998 ರ ಅರ್ಜಿಯ ಮೇರೆಗೆ ಸಕ್ರಮ ಮಾಡಲು ದಿನಾಂಕ: 09-05-2005 ರ ನಡವಳಿಯಂತೆ ತೀರ್ಮಾನಿಸಿರುತ್ತದೆ ಹಾಗೂ ಶ್ರೀ ಕೆ.ವಿ ಅನಂತರಾಮಯ್ಯ ರವರ ಅರ್ಜಿಯು ಬಾಕಿ ಇರುತ್ತದೆ.<br>ಈ ಸಕ್ರಮಾತಿ ನಡವಳಿ ವಿರುದ್ಧ ಶ್ರೀ ಕೆ.ವಿ.ಅನಂತರಾಮಯ್ಯ ರವರು ಉಪವಿಭಾಗಾಧಿಕಾರಿ, ಬೆಂಗಳೂರು ಉತ್ತರ ಉಪವಿಭಾಗ ರವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 49 ಮತ್ತು 108 ರಡಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಪ್ರಕರಣ ಸಂಖ್ಯೆ:ಎಲ್.ಎಸ್.ಡಿ/ಸಿಆರ್/78/07-08 ರಂತೆ ವಿಚಾರಣೆ ನಡೆದು ಅಂತಿಮವಾಗಿ ದಿನಾಂಕ:04-02-2008 ರಂದು ಮೇಲ್ಮನವಿಯನ್ನು ಪುರಸ್ಕರಿಸಿ ಪುನರ್ ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಮಂಡಿಸಲು ಆದೇಶಿಸಿರುತ್ತದೆ.<br>ಉಪವಿಭಾಗಾಧಿಕಾರಿಯವರ ಆದೇಶದ ವಿರುದ್ಧ ಶ್ರೀಮತಿ ಹನುಮಕ್ಕ ರವರು ವಿಶೇಷ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮತ್ತು ಆನಂತರ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ರಿವಿಷನ್ ಅರ್ಜಿ ಸಂ: 32/2009 ರಂತೆ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ;23-12-2015 ರಂದು ಅರ್ಜಿದಾರರ ರಿವಿಷನ್ ಅರ್ಜಿಯನ್ನು ವಜಾಕರಿಸಿ, ಉಪವಿಭಾಗಾಧಿಕಾರಿಗಳು ಮತ್ತು ವಿಶೇಷ ಜಿಲ್ಲಾಧಿಕಾರಿಗಳು ಮಾಡಿರುವ ಆದೇಶವನ್ನು ಎತ್ತಿಹಿಡಿದು ಆದೇಶಿಸಿರುತ್ತದೆ.<br>ಮುಂದುವರಿದು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಆದೇಶದ ವಿರುದ್ಧ ಶ್ರೀಮತಿ ಹನುಮಕ್ಕ ರವರು ಘನ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ.33219/2016 (ಕೆಎಲ್.ಆರ್.-ಆರ್.ಇಎಸ್) ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿದ್ದು, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾದ ನಂತರ ಮಾನ್ಯ ನ್ಯಾಯಾಲಯದ ಆದೇಶಾನುಸಾರ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು. |
| ಆ) | ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; | |
| ಇ) | ಬೆಂಗಳೂರು ಉತ್ತರ ತಾಲ್ಲೂಕು (ಅಪರ) ಯಲಹಂಕ ಹೆಸರಘಟ್ಟ ಹೋಬಳಿ, ಕಡತನಮಲೆಗ್ರಾಮದ ಸ.ನಂ.59ರಲ್ಲಿ ಕಾನೂನು ಬಾಹಿರವಾಗಿ ಬಗರ್ ಹುಕುಂ ಭೂ ಮಂಜೂರಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ) | ಈ ಕಾನೂನು ಬಾಹಿರ ಮಂಜೂರಾತಿಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಆರ್‌ಡಿ 110 ಎಲ್‌ಜಿಕ್ಯೂ 2018

(ಆರ್.ವಿ. ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು